ವಿಷಯ:- ಲಾಲ್‌ಬಾಗ್ ಸಸ್ಯ ತೋಟಕ್ಕೆ ರೋಡ್ ಸ್ವೀಪರ್ ಖರೀದಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 23 (80)

ಶ್ರೀ ಯು.ಆರ್.ಸಭಾಪತಿ (ಉಡುಪಿ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಲಾಲ್‌ಬಾಗ್ ಸಸ್ಯ ತೋಟದಲ್ಲಿಯ ರಸ್ತೆಗಳ ಸ್ವಚ್ಚತೆಯ ಬಗ್ಗೆ ರೋಡ್ ಸ್ವೀಪರ್‌ನ್ನು ಕೊಂಡುಕೊಳ್ಳಲು ಸರ್ಕಾರದವರು ಅನುಮೋದನೆ ನೀಡಿದ್ದಾರೆಯೇ? : ಅನುಮೋದನೆ ನೀಡಿರುವುದಿಲ್ಲ.

ಆ) ಅನುಮೋದನೆ ನೀಡಿಲ್ಲವಾದರೆ ಸರ್ಕಾರದ ಅನುಮತಿಯಿಲ್ಲದೆ ಕೊಂಡುಕೊಂಡಿರುವ ಅಧಿಕಾರಿಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಈ ಖರೀದಿಯ ವಿಷಯವು ಇತ್ತೀಚೆಗೆ ಸರ್ಕಾರದ ಗಮನಕ್ಕೆ ಬಂದಿದೆ. ಯಾವ ಸನ್ನಿವೇಶಗಳಲ್ಲಿ ಈ ಖರೀದಿಯನ್ನು ಮಾಡಲಾಗಿದೆ ಎಂಬ ಬಗ್ಗೆ ಸೂಕ್ತವಾಗಿ ಪರಿಶೀಲಿಸಲಾಗುತ್ತಿದೆ.

ಇ) ರೋಡ್ ಸ್ವೀಪರ್‌ಗೆ ತಗುಲಿದ ವೆಚ್ಚ ವೆಷ್ಟು? ಕೊಂಡುಕೊಂಡು ಆರು ತಿಂಗಳಾದರೂ ಇದನ್ನು ಉಪಯೋಗಸದೆ ಇರುವುದಕ್ಕೆ ಕಾರಣಗಳೇನು ? : ರೋಡ್ ಸ್ವೀಪರ್ ಯಂತ್ರಕ್ಕೆ ರೂ. 6, 53, 640.00 ಗಳು ತಗಲಿದ್ದು, ಚಾಲನೆ ಮಾಡಲು ಒಂದು ಡೈನಾ 900 ಕ್ಯಾಬಿನ್ ಮತ್ತು ಛಾಸಿಗೆ ರೂ. 4, 22, 331.00 ಗಳು ಮತ್ತು ಇತರೆ ಬಿಡಿ ಭಾಗಗಳಿಗೆ ರೂ. 83, 820-00 ಗಳು ತಗಲಿರುತ್ತದೆ ಒಟ್ಟು ಈ ಕಾರ್ಯಕ್ಕೆ ರೂ. 11, 59, 791.00 ಗಳು ವೆಚ್ಚವಾಗಿದೆ ಈ ವಾಹನವನ್ನು ದೆಹಲಿಯಿಂದ ಬೆಂಗಳೂರಿಗೆ ರಸ್ತೆ ಮೂಲಕ ಕಳುಹಿಸಿ ಟ್ರಯಲ್‌ಗಾಗಿ ಕೇವು ದಿವಸಗಳು ಓಡಿಸಿದ ಮೇಲೆ ಎಂಜಿನ್ ಸಿಲೆಂಡರ್ ತೊಂದರೆಯಿಂದ ಉಪಯೋಗಿಸಲಾಗಿಲ್ಲ. ಖರೀದಿಸಿದ ಸಂಸ್ಥೆಯು ಸ್ಥಳೀಯ ಶಾಖೆಗೆ ದುರಸ್ತಿಗಾಗಿ ಬಿಡಲಾಗಿದೆ. ದುರಸ್ತಿಯಾದ ತಕ್ಷಣ ಲಾಲ್‌ಬಾಗ್ ಸಸ್ಯತೋಟ ರಸ್ತೆ ಸ್ವಚ್ಚತೆಗಾಗಿ ಉಪಯೋಗಿಸಲಾಗುವುದು.

ಶ್ರೀ ಡಿ. ಟಿ. ಜಯಕುಮಾರ್.
(ತೋಟಗಾರಿಕೆ ರಾಜ್ಯ ಸಚಿವರು)

ವಿಷಯ:- ಕೃಷಿ ಫಾರಂ ನೌಕರರು

ಸಿಂಧನೂರು-ಧಡೆಸೂರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 24 (87)

ಶ್ರೀ ಕೆ.ವಿರುಪಾಕ್ಷಪ್ಪ (ಸಿಂಧನೂರು)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯ ಸರ್ಕಾರಕ್ಕೆ ಸೇರಿದ ಸಿಂಧನೂರು ತಾಲ್ಲೂಕಿನ ಧಡೇಸೂರು ಕೃಷಿ ಫಾರಂನಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು ? : 12

ಆ) ಈ ನೌಕರರಿಗೆ ಸಾರ್ವತ್ರಿಕ ರಜೆ ಸೌಲಭ್ಯ ಕಲ್ಪಿಸದಿರಲು ಕಾರಣವೇನು ? ಈ ನೌಕರರಿಗೆ ಸಾರ್ವತ್ರಿಕ ರಜೆ ಸೌಲಭ್ಯವಿರುವುದು.

ಶ್ರೀ ಸಿ. ಬೈರೇಗೌಡ

(ಕೃಷಿ ಸಚಿವರು)

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ: ಮಾನ್ಯ ಅಧ್ಯಕ್ಷರೆ , ಕಳೆದ ಅಧಿವೇಶನದಲ್ಲಿ ಒಪ್ಪಿಸಿದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕಗಳ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
1.	ಮೈಸೂರು (ಧಾರ್ಮಿಕ ಮತ್ತು ಧರ್ಮ ದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ ವಿಧೇಯಕ, 1995	12. 10. 1995	ರಾಜ್ಯಪಾಲರು
2.	ಕರ್ನಾಟಕ ಅಚ್ಚುಕಟ್ಟು (ಪ್ರದೇಶಾಭಿವೃದ್ಧಿ ತಿದ್ದುಪಡಿ) ವಿಧೇಯಕ, 1995	18. 11. 1995	"
3.	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದು ಪಡಿ) ವಿಧೇಯಕಧ 1996	05. 3. 1996	"
4.	ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳ (ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕ, 1996	14. 3. 1996	"
5.	ಕರ್ನಾಟಕ ತೆರಿಗೆ ಕಾನೂನುಗಳು (ಎರಡನೇ ತಿದ್ದುಪಡಿ) ವಿಧೇಯಕ, 1996	20. 3. 1996	"
6.	ಕರ್ನಾಟಕ ಧನ ವಿನಿಯೋಗ ವಿಧೇಯಕ, 1996	20. 3. 1996	"
7.	ಕರ್ನಾಟಕ ಧನ ವಿನಿಯೋಗ (ಲೇಖಾನು ಧಾನ) ವಿಧೇಯಕ, 1996	20. 3. 1996	"
8.	ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 1996	27. 3. 1996	"
9.	ಕರ್ನಾಟಕ ನ್ಯಾಯಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗಧಿ(ತಿದ್ದುಪಡಿ) ವಿಧೇಯಕ, 1996	27. 3. 1996	"
10.	ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ)		